**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪರೀಕ್ಷಾಂಗ/ದ.ದೀ.ಘ/2023–24　　　　ದಿನಾಂಕ: 09.05.2024

## ಮರು ಅಧಿಸೂಚನೆ

**ವಿಷಯ: 2024ರಲ್ಲಿ ನಡೆಯಲಿರುವ ದಶಮ ಮತ್ತು ಏಕಾದಶ ದೀಕ್ಷಾಂತ ಘಟಿಕೋತ್ಸವದಲ್ಲಿ ಪದವಿ ಪ್ರಮಾಣಪತ್ರ ಪಡೆಯಲು ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.**

ಉಲ್ಲೇಖ: 1. ಅಧಿಸೂಚನೆ (ಪರಿಷ್ಕೃತ–1) ಸಂಖ್ಯೆ: ಕಸಂವಿ/ಪರೀಕ್ಷಾಂಗ/ದ.ದೀ.ಘ/2023–24; ದಿನಾಂಕ: 28.12.2023.
2. ಮಾನ್ಯ ಕುಲಪತಿಗಳ ಅನುಮೋದನೆ ಕಂಡಿಕೆ ಸಂಖ್ಯೆ: 46; ದಿನಾಂಕ: 09.05.2024.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2021–22ನೇ ಸಾಲಿನ ದಶಮ ಹಾಗೂ 2022–23ನೇ ಸಾಲಿನ ಏಕಾದಶ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ಅಗತ್ಯ ಸಿದ್ಧತೆಗಳನ್ನು ನಡೆಸುತ್ತಿದ್ದು, ಪದವಿ ಪ್ರಮಾಣಪತ್ರಗಳನ್ನು ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಉಲ್ಲೇಖ 1ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮವನ್ನು 2024ರ ಜೂನ್ 14ರಂದು ನಡೆಸುತ್ತಿರುವ ಹಿನ್ನೆಲೆಯಲ್ಲಿ, ಉಲ್ಲೇಖ 2ರ ಮಾನ್ಯ ಕುಲಪತಿಗಳ ಅನುಮೋದನೆಯಂತೆ, ಪದವಿ ಪ್ರಮಾಣಪತ್ರಗಳನ್ನು ಪಡೆಯಲು ದಂಡಶುಲ್ಕ ಸಹಿತ ಅರ್ಜಿಗಳನ್ನು ಸಲ್ಲಿಸುವ ದಿನಾಂಕವನ್ನು ವಿಸ್ತರಿಸಿ ಮರು ಅಧಿಸೂಚನೆ ಹೊರಡಿಸಿದೆ.

### ಪದವಿ ಪ್ರಮಾಣಪತ್ರಗಳ ಶುಲ್ಕದ ವಿವರಗಳು

| ಕ್ರಸಂ. | ತರಗತಿಗಳ ವಿವರಗಳು | ಶುಲ್ಕ |
|---|---|---|
| 1. | 2021–22 ಮತ್ತು 2022–23ನೇ ಸಾಲಿನ ಬಿ.ಎ./ಎಂ.ಎ. ತರಗತಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ | 1000.00 + 100.00 (ದಂಡಶುಲ್ಕ) |
| 2. | 2021–22ನೇ ಸಾಲಿನ ಪೂರ್ವದಲ್ಲಿ ಬಿ.ಎ./ಎಂ.ಎ. ತರಗತಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ | 1100.00 + 100.00 (ದಂಡಶುಲ್ಕ) |
| 3. | ಎಂ.ಫಿಲ್. ತರಗತಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ | 600.00 + 100.00 (ದಂಡಶುಲ್ಕ) |
| 4. | ಪಿಎಚ್.ಡಿ./ಡಿ.ಲಿಟ್ ಪದವಿ ಪ್ರಮಾಣಪತ್ರಗಳಿಗೆ ಪಾವತಿಸಬೇಕಾದ ಶುಲ್ಕ | 2000.00 + 100.00 (ದಂಡಶುಲ್ಕ) |
| ಎಲ್ಲಾ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಅಂತಿಮ ದಿನಾಂಕ | | **20.05.2024** |
| ಕಾಲೇಜುಗಳಿಂದ ವಿಶ್ವವಿದ್ಯಾಲಯಕ್ಕೆ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ | | **21.05.2024** |

**ಸೂಚನೆಗಳು:**

- ಯು.ಯು.ಸಿ.ಎಮ್.ಎಸ್.ನಲ್ಲಿ ನೋಂದಣಿಯಾದ ವಿದ್ಯಾರ್ಥಿಗಳು (2021–22ನೇ ಸಾಲಿನಲ್ಲಿ ಸ್ನಾತಕೋತ್ತರ(M.A.) ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು) ಯು.ಯು.ಸಿ.ಎಮ್.ಎಸ್. ಮೂಲಕವೂ ಪದವಿ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸುವುದು. ಶುಲ್ಕವನ್ನು **Payment gateway** ಮೂಲಕ ಪಾವತಿಸಿ ರಶೀದಿಯನ್ನು ಯು.ಯು.ಸಿ.ಎಮ್.ಎಸ್.ನಲ್ಲಿ

ಅಪ್ಲೋಡ್ ಮಾಡುವುದು ಹಾಗೂ ಶುಲ್ಕ ಪಾವತಿಸಿದ ದಾಖಲೆಯೊಂದಿಗೆ, ಭೌತಿಕ ಅರ್ಜಿಯನ್ನು ಭರ್ತಿ ಮಾಡಿ ಕಾಲೇಜಿನ ಪ್ರಾಚಾರ್ಯರಿಗೆ ನೀಡುವುದು.

- **Non UUCMS** ವಿದ್ಯಾರ್ಥಿಗಳು ಪ್ರಮಾಣಪತ್ರಗಳ ಶುಲ್ಕವನ್ನು **Payment gateway** **https://www.onlinesbi.sbi/sbicollect/icollecthome.htm?corpID=2933157** ಮೂಲಕ ಪಾವತಿಸಿ, ಭೌತಿಕ ಅರ್ಜಿಯೊಂದಿಗೆ ರಶೀದಿಯನ್ನು ಲಗತ್ತಿಸಿ ಅಗತ್ಯ ದಾಖಲೆಗಳೊಂದಿಗೆ ತಾವು ಅಧ್ಯಯನ ಮಾಡಿದ ಕಾಲೇಜಿನ ಪ್ರಾಚಾರ್ಯರಿಗೆ ನೀಡುವುದು.

ಮಹಾವಿದ್ಯಾಲಯಗಳು ಮತ್ತು ಕ.ಸಂ.ವಿ. ಪರಿಸರದ ವಿದ್ಯಾರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:

| Non UUCMS BA Students | Non UUCMS MA Students | UUCMS MA Students | M.Phil. Students | Ph.D. Scholors |
|---|---|---|---|---|
| Filled Application form | Filled Application form | Through UUCMS Downloaded Application form | Filled Application form | Filled Application form |
| Copy of SSLC/Sahitya Marks card | Copy of SSLC/Sahitya Marks card | Copy of SSLC/Sahitya Marks card | Copy of SSLC/Sahitya Marks card | Copy of SSLC/Sahitya Marks card |
| BA I, II & III year Marks Cards copy or Result Sheet copy | MA Four Semesters Marks Cards copy or Result Sheet copy | MA Four Semesters Marks Cards copy or Result Sheet copy | Course Work certificate & M.Phil. Marks sheet | Ph.D. Declaration Notification |
| Pass port size Photo in Application | Passport size Photo in Application | Passport size Photo 1 | Passport size Photo (1 in Application & 1 extra) | Passport size Photo (1 in Application & 1 extra) |
| Fees Payment Challan | Fees Payment Challan | Fees Payment Challan | Fees Payment Challan | Fees Payment Challan |

- ಪ್ರಾಚಾರ್ಯರು ಅರ್ಜಿಗಳನ್ನು ದೃಢೀಕರಿಸಿ, ನಿಗದಿತ ನಮೂನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳ (**UUCMS** & **Non UUCMS**) ಮಾಹಿತಿಯನ್ನು ತುಂಬಿ ನಿಗದಿತ ದಿನಾಂಕದೊಳಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.
- ಅರ್ಜಿಯನ್ನು ಸಲ್ಲಿಸುವ ಅರ್ಹ ವಿದ್ಯಾರ್ಥಿಗಳು ತಮ್ಮ ಹೆಸರು & ತಂದೆಯ ಹೆಸರನ್ನು ಸಂಸ್ಕೃತ ಮತ್ತು ಆಂಗ್ಲ ಎರಡೂ ಭಾಷೆಯಲ್ಲಿ ಕಡ್ಡಾಯವಾಗಿ ನಮೂದಿಸಬೇಕು.
- ಘಟಿಕೋತ್ಸವ ಪದವಿ ಪ್ರಮಾಣಪತ್ರಗಳ ಅರ್ಜಿಗಳನ್ನು ಸ್ವೀಕರಿಸಿದ ಮಾನ್ಯತೆಗೊಳಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರು ವಿದ್ಯಾರ್ಥಿಗಳ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ, Soft Copyಯನ್ನು ಪರೀಕ್ಷಾಂಗದ ಮಿಂಚಂಚೆ (ಇ–ಮೇಲ್): **examksu2016@gmai.com**ಗೆ ಕಳುಹಿಸುವುದು. Hard Copyಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗಕ್ಕೆ ಸಲ್ಲಿಸುವುದು.(Fonts: For Samskrita - Sanskrit 2003(Unicode Font); For English – Times New Roman; Size 12)
- ಕ.ಸಂ.ವಿ. ಪರಿಸರದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗಾಧ್ಯಕ್ಷರಿಂದ ದೃಢೀಕರಿಸಿ ಹಾಗೂ ಎಂ.ಫಿಲ್./ಪಿಎಚ್.ಡಿ./ಡಿ.ಲಿಟ್ ವಿದ್ಯಾರ್ಥಿಗಳು ಅರ್ಜಿಗಳನ್ನು ಅಧ್ಯಯನಾಂಗದ ನಿರ್ದೇಶಕರಿಂದ ದೃಢೀಕರಿಸಿ ಅಧ್ಯಯನಾಂಗಕ್ಕೆ ಸಲ್ಲಿಸುವುದು. ಅಧ್ಯಯನಾಂಗವು ಪ್ರಮಾಣಪತ್ರಕ್ಕಾಗಿ ಸಲ್ಲಿಕೆಯಾದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ, ಕ್ರೋಢೀಕರಿಸಿ ಪರೀಕ್ಷಾಂಗಕ್ಕೆ ಸಲ್ಲಿಸುವುದು.

9/5/22

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–Iರ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪದವಿ ಪ್ರಮಾಣಪತ್ರದ ಶುಲ್ಕದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ.
- ಕ.ಸಂ.ವಿ. ಅಧ್ಯಯನಾಂಗದ ನಿರ್ದೇಶಕರು/ವಿಭಾಗಾಧ್ಯಕ್ಷರು ಹಾಗೂ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರಿಂದ ದೃಢೀಕರಿಸದ ಮತ್ತು ಅಗತ್ಯವಾದ ದಾಖಲೆಗಳನ್ನು ಲಗತ್ತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ನಿಗದಿತ ಅರ್ಜಿಗಳನ್ನು ವಿಶ್ವವಿದ್ಯಾಲಯದ **http://ksu.ac.in** ವೆಬ್‌ಸೈಟ್‌ನಿಂದ ಪಡೆಯುವುದು.
- ದಶಮ ಹಾಗೂ ಏಕಾದಶ ದೀಕ್ಷಾಂತ ಘಟಿಕೋತ್ಸವಕ್ಕೆ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಯಾವುದೇ ಕಾರಣಕ್ಕೂ ಮತ್ತೊಮ್ಮೆ ವಿಸ್ತರಿಸಲಾಗುವುದಿಲ್ಲ.

ಕುಲಸಚಿವರು (ಮೌಲ್ಯಮಾಪನ)
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

**Registrar (Evaluation)**
Karnataka Samskrita Vishwavidyalaya
Bengaluru - 560 018.

ಇವರಿಗೆ,

1. **ನಿರ್ದೇಶಕರು,** ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
2. **ವಿಭಾಗಾಧ್ಯಕ್ಷರುಗಳು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ಪರಿಸರ), ಬೆಂಗಳೂರು.
3. **ಪ್ರಾಚಾರ್ಯರು,** ಸರ್ಕಾರಿ & ಕ.ಸಂ.ವಿ. ಅಧೀನ ಮಹಾವಿದ್ಯಾಲಯಗಳು.

ಪ್ರತಿಗಳು:

1. **ಮಾನ್ಯ ಕುಲಪತಿಗಳ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
2. **ಮಾನ್ಯ ಕುಲಸಚಿವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
3. **ಹಣಕಾಸು ವಿಭಾಗ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
4. **ನೋಡಲ್ ಅಧಿಕಾರಿಗಳು,** ಇ–ಆಡಳಿತ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು –ಜಾಲತಾಣದಲ್ಲಿ ಪ್ರಕಟಿಸಲು
5. ಸೂಚನಾ ಫಲಕ
6. ಕಛೇರಿ ಪ್ರತಿ.